**Order Sheet**
**In the Court Of: PRL. CIVIL JUDGE AND JMFC BELAGAVI**
**AT BELGAUM**
**F.R.No:{f_r_no}**
**Case Reg.No: O.S./557/2010**

**Plaintiff** V E R S U S **Defendent**

-----------------------------------------------------------------------------------------------------------

**1)Narayan Yashwant Karlekar** **1)Sri Shettu Rama Karlekar**

ಓ.ಎಸ್ ನಂಃ 557 ಃ 2010
ಡಿ. ಡಬ್ಲ್ಯೂ- 1

ದಿ. 30-08-2017 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

ಪಾಟೀ ಸವಾಲುಃ ಶ್ರೀ. ಎ ಐ ಜೆ . ವಕೀಲರಿಂದ ಃ-

ನನ್ನ ತಂದೆಯ ಹೆಸರು ರಾಮಕಾರ್ಲೆಕರ . ನಮ್ಮ ತಂದೆಯ ಒಡಹುಟ್ಟಿದವರು ೫ ಮಂದಿ ಅವರುಗಳೆಂದರೆ ಯಶಂತ ಕಾರ್ಲೆಕರ , ದಾಖಲು ಕಾರ್ಲೆಕರ , ಮಹಾದೇವ ಕಾರ್ಲೆಕರ ಮತ್ತು ಗುಂಡೂ ಕಾರ್ಲೆಕರ ದಾವ ಆಸ್ತಿಯ ಸಂಖ್ಯೆ ಸರ್ವೆ ೨೨೨ಃ೧ ಅಂದರೆ ಸರಿ. ಅದರ ವಿಸ್ತೀರ್ಣ ೩ ಗುಂಟೆ ಇರುತ್ತದೆ . ಸದರಿ ಆಸ್ತಿಯು ನಮ್ಮ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ . ಸದರಿ ಆಸ್ತಿಯನ್ನು ಅ , ಬ , ಡ , ಕ , ಇ ಎಂದು ಭಾಗ ಮಾಡಲಾಗಿತ್ತು ಅಂದರೆ ಸಾಕ್ಷಿಯು ತನಗೆ ಆ ವಿಚಾರ ತಿಳಿದಿರುವುದಿಲ್ಲ ನಮ್ಮ ಹಿರಿಯರಿಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ . ನಿಪಿ-೨ ರಲ್ಲಿ ಸದರಿ ಆಸ್ತಿಯು ಭಾಗ ಆಗಿರುವ ಬಗ್ಗೆ ನಮುದಾಗಿದೆ ಅಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ . ಸದರಿ ಭಾಗ ವಾದಂತೆ ಪಹಣಿಗಳು ಇವೆ ಅಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ . ಸರ್ವೆ ನಂ ೨೨೨ಃ೧ ಅ ದಾಖಲು ಕಾರ್ಲೆಕರ ಎಂಬುವವರಿಗೆ ಸೇರಿದ್ದು ಅಂದರೆ ಗೊತ್ತಿಲ್ಲ ಎಂದು ನುಡಿಯುತಾರೆ . ೨ ನೇ ಪಟ್ಟಿ ಸರ್ವೆ ನಂ. ೨೨೨ಃ೧ ಬ ಯಶಂವತ ಕಾರ್ಲೆಕರ ಅವರಿಗೆ ಸೇರಿದು ಅಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ . ೩ ನೇ ಪಟ್ಟಿ ೨೨೨ಃ೧ ಕ ಮಹಾದೇವ ಕಾರ್ಲೆಕರ

ಅವರಿಗೆ ಸೇರಿದ್ದು ಅಂದರೆ ಗೊತ್ತಿಲ್ಲ , ೪ ನೇ ಪಟ್ಟಿ ೨೨೨◌೯ ಡ ಗುಂಡೂ ಕಾರ್ಲೆಕರ ಅವರಿಗೆ ಸೇರಿದ್ದು ಅಂದರೆ ಗೊತ್ತಿಲ್ಲ. ೫ ನೇ ಪಟ್ಟಿ ೨೨೨◌೯ ಇ ರಾಮ ಕಾರ್ಲೆಕರ ಅವರಿಗೆ ಸೇರಿದ್ದು ಅಂದರೆ ಗೊತ್ತಿಲ್ಲ. ೧ ನೇ ವಾದಿಯು ನಾರಾಯಣ ಕಾರ್ಲೆಕರ ಯಶವಂತ ಕಾರ್ಲೆಕರ ಎಂಬುವವರ ಮಗ ಅಂದರೆ ಸರಿ. ೨ ನೇ ವಾದಿ ಲಕ್ಷ್ಮಣ ಕಾರ್ಲೆಕರ ಮಹಾದೇವ ಕಾರ್ಲೆಕರ ಎಂಬುವರರ ಮಗ ಅಂದರೆ ಸರಿ. ೩ ನೇ ವಾದಿ ಕೃಷ್ಣ ಕಾರ್ಲೆಕರ ದಾಖಲೂ ಕಾರ್ಲೆಕರ ಅವರ ಮಗ ಅಂದರೆ ಸರಿ. ಭಾಗವಾಗಿದ್ದ ವಿಚಾರ ತಿಳಿದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ . ಸರ್ವೆ ನಂ೨೨೨◌೯ ಸರ್ವೆ ಮಾಡಿದಂತೆ ಪಹಣಿಯನ್ನು ಬರೆಯುವ ಬದಲು ಹೆಚ್ಚು ಕಡಿಮೆ ಮಾಡಿರುತ್ತಾರೆ ಅಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ . ಸದರಿ ಸರ್ವೆ ನಂ೨೨೨◌೯ ರ ಮೇಲೆ ಸಬ್ ಡಿವಿಷನ್ ಮಾಡಿದ್ದನ್ನು ಡಿಡಿಎಲ್ ಆರ್ ರಲ್ಲಿ ನಾವು ಪ್ರಶ್ನಿಸಿದ್ದೆವು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಅಪೀಲನಲ್ಲಿ ಮರು ಸರ್ವೆ ಮಾಡಲು ಅನುಮತಿ ಕೋರಿದ್ದೆವು ಅಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ . ಸರ್ವೆ ನಂ ೨೨೨◌೯ ರಲ್ಲಿ ನನಗೆ ಸೇರಿದ ಸ್ವತ್ತು ಯಾವ ಕಡೆಗೆ ಇದೆ ಎಂದು ನನಗೆ ತಿಳಿದಿಲ್ಲ .

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆ.ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿಯಿದೆ.**

**೩ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**